ಮಾಡೋಕೆ ಅಂತ ಈ ತೀರ್ಮಾನ ಮಾಡಿದರು. ನನಗೂ ಬೇರೆ ಯಾವ ಆಯ್ಕೆ ಇರಲಿಲ್ಲ ಅಕ್ಕ.' ಅವಳ ಧ್ವನಿ ಕುಗ್ಗಿತ್ತು. ಅವಳದೊಂದು ರೇಷ್ಮೆ ಲಂಗವನ್ನ ಒಂದು ದಿನದ ಮಟ್ಟಿಗೆ ತಂಗಿ ಹಾಕಿಕೊಂಡಳು ಅಂತ ರಂಪಾಟ ಮಾಡಿದ ಸುಮತಿ ಇವಳೇನಾ ಅನ್ನಿಸಿತು. ನಾನು ನಕ್ಕುಬಿಟ್ಟು ಹೇಳಿದೆ, 'ಅದೆಲ್ಲ ಮುಗಿದ ಕಥೆ. ನೀನು ಚೆನ್ನಾಗಿದ್ದೀಯ ತಾನೇ! ಅಷ್ಟು ಸಾಕು. ನನಗೇನೂ ಅವನೊಂದಿಗೆ ಬದುಕುವ ಇಚ್ಛೆ ಇಲ್ಲ' ಅಂತ.

ಅವಳೂ ನಿರಾಳವಾದಳು. ಕ್ರಮೇಣ ವಾರಕ್ಕೊಮ್ಮೆ ಬಂದು ಹೋಗುತ್ತ, ಪ್ರಭ ಕೂಡ ಅವಳೊಂದಿಗೆ ಅವನ ಮನೆಗೆ ಹೋಗಿ ಬರತೊಡಗಿದ್ದಳು. ನಾನೇನೂ ತಡೆಯುತ್ತಿರಲಿಲ್ಲ. ನನ್ನ ಕರ್ಮಕ್ಕೆ ಮಗುವನ್ನು ಅಪ್ಪನಿಂದ ಏಕೆ ದೂರ ಮಾಡಬೇಕು?

ಅವನೂ ಹೇಳಿ ಕಳುಹಿಸಿದ್ದ ಸುಮತಿ ಜೊತೆಯಲ್ಲಿ... ಅಲ್ಲೇ ಬಂದು ಇರಲು. ಆದರೆ ನನಗೆ ಮನಸ್ಸೇಕೋ ಬೇಡ ಅನ್ನಿಸಿತು. ಸುಮತಿ ಹೇಳಿದ್ದಳು 'ಅಕ್ಕಾ ಬಾರೆ. ಹೇಗಿದ್ರೂ ನನಗೂ ಯಾರೂ ಇಲ್ಲ. ತವರು ಅಂದ್ರೆ ಇಲ್ಲಿರೋದು ನೀನು ಮಾತ್ರ. ಭಾವಂಗೆ ನಿಜವಾಗಿಯೂ ಬೇಸರವಾಗಿದೆ ಕಣೆ. ಅವರಿಗೆ ತಾವು ಮಾಡಿದ್ದು ಸರಿಯಿಲ್ಲ ಅಂತ ಗೊತ್ತಾಗಿದೆ. ಅವತ್ತು ಅವರು ಹಾಗೆ ನಡೆದುಕೊಳ್ಳಬಾರದಿತ್ತು. ಏನೋ ಒಂದು ಗಳಿಗೆ ಹಾಗೆ ಆಗುತ್ತೆ. ಬಿಟ್ಟು ಬಿಡೇ. ಬಾ, ಅವರು ನಿನ್ನನ್ನು ನೋಡಬೇಕು ಅಂತ ಎಷ್ಟೋ ಸಲ ಹಂಬಲಿಸುತ್ತಿದ್ದಾರೆ. ನೀನೇ ಒಪ್ಪುತ್ತಿಲ್ಲ. ಪುಟ್ಟಿನ ನೋಡುತ್ತಾ ಎಷ್ಟೋ ಸಲ ಅಳ್ತಾ ಇರ್ತಾರೆ ಕಣೆ...' ದುಃಖಗೊಂಡು ಹೇಳಿದ್ದಳು.

'ಹೋಗಲಿ ಬಿಡು ಸುಮ. ಇದು ಯಾವುದೂ ಶಾಶ್ವತ ಅಲ್ಲ ಅಂತ ನನಗೆ ಬಹಳ ಮೊದಲೇ ಗೊತ್ತಾಗಿ ಹೋಗಿತ್ತು ಕಣೆ. ಅದಕ್ಕೆ ಭಗವಂತನೇ ಒಂದು ದಾರಿ ತೋರಿಸಿದ ಅಷ್ಟೆ. ಈಗೇನು, ಎಲ್ಲರೂ ಸುಖವಾಗಿದ್ದೀರಿ. ನಾನು ಕೂಡ ಸಂತೋಷವಾಗೇ ಇದ್ದೇನೆ. ಯಾವ ಕಷ್ಟವೂ ಇಲ್ಲದೇ... ಮತ್ತೆ ಸುಮ್ಮನೆ ಯಾವುದನ್ನೂ ಕೆದಕುವುದು ಬೇಡ. ಜೀವನದಲ್ಲಿ ಅನೇಕ ರೀತಿಯ ಉಬ್ಬರಗಳು ಬರುತ್ತವೆ. ಸಮುದ್ರದಲ್ಲಿ ಬರಲ್ಲವೇ ಹಾಗೆ. ಅದು ತಾನಾಗೇ ಇಳಿಯಲು ಬಿಟ್ಟುಬಿಡಬೇಕು. ನಾವು ಇಳಿಸಲು ಹೋಗಬಾರದು...' ವಾಸಂತಿ ಗಂಭೀರವಾಗೇ ಹೇಳಿದ್ದಳು.

ಆದರೆ, ವಾಸಂತಿ ನೆನೆದಳು, ಇಷ್ಟು ಗಟ್ಟಿಯಾದ ತನ್ನ ನಿಲುವನ್ನು ಬುಡಸಮೇತ ಅಲುಗಾಡಿಸುವ ಪ್ರಸಂಗವೊಂದು ಬಂದೇ ಬಿಟ್ಟಿತು. ಆವತ್ತು ಹಳ್ಳಿಯ ಸಂತೆ. ಸುತ್ತ ಮುತ್ತಲೂ ಊರು, ಗ್ರಾಮಗಳಿಂದ ಸಾವಿರಾರು ಜನ ನೆರೆಯುವ ಸಂತೆ. ತಾನು ಯಾವಾಗಲೂ ಬೆಳಿಗ್ಗೆಯೇ ಹೋಗಿ ಅರ್ಧ ಗಂಟೆಯಲ್ಲಿ ಮನೆಗೆ ಬೇಕಾದ ಕೆಲವು ಪದಾರ್ಥಗಳನ್ನು ತಂದಿಟ್ಟುಕೊಂಡು ಬಿಡುವುದು ವಾಡಿಕೆ. ಹೊತ್ತಾದರೆ ಊರಿನ ಜನ ಸಿಗುತ್ತಾರೆ, ಮಾತನಾಡಲು ತನಗೆ ಇಷ್ಟವಿಲ್ಲ. ಮುಖ್ಯವಾಗಿ ಪ್ರಭಳ ತಂದೆ ಏನಾದರೂ ಬಂದರೆ ಎಂಬ ಚಿಂತೆ. ಪುಟ್ಟಿ ಸಾಧಾರಣವಾಗಿ ಹಿಂದಿನದಿನವೇ ಅವರಪ್ಪನ ಮನೆಗೆ ಹೋಗಿ ಮರುದಿನ ಸಂತೆ ಮುಗಿಸಿಕೊಂಡು, ಕೈತುಂಬಾ ಸಿಕ್ಕ ಸಿಕ್ಕ ಆಟಿಕೆಗಳನ್ನು ಹಿಡಿದುಕೊಂಡು ಸುಮಳ ಜೊತೆ ಬರುತ್ತಿದ್ದಳು. ಆವತ್ತು ಹಿಂದಿನ ದಿನ ವಿಪರೀತ ಮಳೆ ಎಂದು ಅವಳನ್ನು ಕಳುಹಿಸಿರಲಿಲ್ಲ. ಸರಿ, ಮುಂಜಾನೆ ಬೇಗ ಹೋಗಿ ಬಂದು ಬಿಡೋಣ ಎಂದು ಪುಟ್ಟಿಯನ್ನು ಪಂಕಜಳ ಬಳಿ ಬಿಟ್ಟು ಹೊರಟುಬಿಟ್ಟೆ. ಇನ್ನೂ ಸಂತೆ ತೆಗೆದೇ ಇರಲಿಲ್ಲ. ಎಲ್ಲ ಅಂಗಡಿಗಳೂ ಹೊದ್ದು ಕುಳಿತಿದ್ದವು. ತೆಗೆದಿದ್ದ ಒಂದೆರಡು ಅಂಗಡಿಗಳಲ್ಲಿ ನನಗೆ ಬೇಕಾದ ಒಂದೆರಡು ವಸ್ತುಗಳಿಗೆ ತೊಂದರೆ ಇರಲಿಲ್ಲ. ಶಾಲೆಯ ಬಯಲು ದಾಟಿ ಹೋದರೆ ಅಂಗಡಿ ಸಿಗುತ್ತಿತ್ತು. ಬಿರಬಿರನೆ ನಡೆಯುತ್ತಿದ್ದೆ. ಆಗ ಇದಿರಿಗೆ ಸಿಕ್ಕವನು ಸುಬ್ರಹ್ಮಣ್ಯ. ನನಗೆ ಒಂದು ಕ್ಷಣ ಗುರುತೂ ಸಿಗಲಿಲ್ಲ, ನಂಬಲೂ ಆಗಲಿಲ್ಲ. ದಿಗ್ಭ್ರಮೆಗೆ ಒಳಗಾದವಳಂತೆ ಸ್ವಲ್ಪ ಹೊತ್ತು ನಿಂತುಬಿಟ್ಟೆ. ಇಷ್ಟು ದಿನ ತಪ್ಪಿಸಿಕೊಂಡು ಓಡಾಡುತ್ತಿದ್ದವಳಿಗೆ, ಹೀಗೆ